2. ಎನ್.ಆರ್. ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

ಅ) ಮುತ್ತಿನಕೊಪ್ಪ – 1ಎ–37 ಗುಂ.

ಆ) ಕೆ. ಕಣಬೂರು – 38ಎ–31 ಗುಂ.

ಯೋಜನೆಯಡಿ ಒಟ್ಟು40ಎ–28 ಗುಂ.

ನಿರ್ವಸತಿಗರಾಗುವ ಜನರ ಸಂಖ್ಯೆ

ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

ಅ) ಲಿಂಗಾಪುರ ಗ್ರಾಮ – 1813

ಆ) ಕಣಗಾಲಕೊಪ್ಪ ಗ್ರಾಮ – 822

ಒಟ್ಟು 2635

ಆ) ಮುಳುಗಡೆಯಾಗುವ ರೈತರಿಗೆ ಪರಿಹಾರ ನೀಡಲು ಗ್ರಾಮವಾರು ಪ್ರಸ್ತಾವನೆಯು ಜಂಟಿ ಅಳತೆಯ ಮುಂದಿನ ಪ್ರಕ್ರಿಯೆಯಲ್ಲಿರುತ್ತದೆ.

ಪುನರ್ವಸತಿ ಕುರಿತಾಗಿ ಕೇಂದ್ರವನ್ನು ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಮತಿಯಿಂದ ಶಿವಮೊಗ್ಗ ತಾಲ್ಲೂಕು ನಿದಿಗೆ ಹೋಬಳಿ ಮಾಚಗೊಳ್ಳಿ ಗ್ರಾಮದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ವಸತಿ ನಿವೇಶನಗಳ ಪೈಕಿ ನಿವೇಶನ ನೀಡಲು ಪುನರ್ವಸತಿ ಸಲಹಾ ಸಮಿತಿಯ ನಿರ್ಣಯದ ಮೇರೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಪ್ರಾಧಿಕಾರಕ್ಕೆ ರೂ. 150.00 ಲಕ್ಷಗಳನ್ನು ಮಾರ್ಚ್ 2004ರಲ್ಲಿ ಪಾವತಿಸಲಾಗಿದೆ. ಅಭಿವೃದ್ಧಿ ಕಾರ್ಯಗಳು ಪ್ರಾಧಿಕಾರದ ಮತಿಯಿಂದ ಪ್ರಗತಿಯಲ್ಲಿವೆ. ಸಂತ್ರಸ್ಥರ ಆಸ್ತಿಪಾಸ್ತಿಗಳ ಮೌಲ್ಯೀಕರಣ ಕಾರ್ಯ ಮುಗಿದಿದ್ದು, ಅಂದಾಜುಗಳು ತಾಂತ್ರಿಕ ಪರಿಶೀಲನೆ ಹಂತದಲ್ಲಿದೆ.

ಇ) ಪುನರ್ವಸತಿ ಕೇಂದ್ರ ನಿರ್ಮಿಸಿ, ಪುನರ್ವಸತಿ ಹಾಗೂ ಪುನರ್‌ನಿರ್ಮಾಣ ಕಾರ್ಯ ಪೂರ್ಣಗೊಳಿಸಿದ ನಂತರ ಅಣೆಕಟ್ಟೆಯಲ್ಲಿ ಪೂರ್ಣಪ್ರಮಾಣದಲ್ಲಿ ನೀರನ್ನು ಎಫ್.ಆರ್.ಎಲ್. ಮಟ್ಟದವರೆಗೆ ನಿಯಂತ್ರಿಸುವ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಇದೆ.

ಉ) ಮುಳುಗಡೆ ಪರಿಹಾರ ಹಾಗೂ ಪುನರ್ವಸತಿ / ಪುನರ್‌ನಿರ್ಮಾಣ ಕಾರ್ಯ ಪೂರ್ಣಗೊಳ್ಳದೆ ಅಣೆಕಟ್ಟೆಯಲ್ಲಿ ತುಂಬು ನೀರಿನ ಮಟ್ಟ (ಎಫ್.ಆರ್.ಎಲ್). ದವರೆಗೆ ನೀರು ನಿಲ್ಲಿಸುವ ಉದ್ದೇಶ ಇರುವುದಿಲ್ಲ.

536(793) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವರಾಹಿ ಯೋಜನೆಯ ಪ್ರದೇಶವಾದ ಮಾಸ್ತಿಕಟ್ಟೆಯಲ್ಲಿ ನಿಗಮಕ್ಕೆ ಸಂಬಂಧಪಟ್ಟ ಯಾವ ಯಾವ ಕಛೇರಿಗಳಿವೆ; ಹಾಗೂ ಅಲ್ಲಿರುವ ಅಧಿಕಾರಿಗಳ ಮತ್ತು ಇತರೆ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು;

ಆ) ಅಲ್ಲಿರುವ ಕಛೇರಿಗಳನ್ನು ಅನಗತ್ಯವಾಗಿ ಹೊಸಂಗಡಿಗೆ ಸ್ಥಳಾಂತರಿಸಿರುವುದು ನಿಜವೇ;

ಇ) ಇದಕ್ಕೆ ಕಾರಣಗಳೇನು;

ಈ) ಮಾಸ್ತಿಕಟ್ಟೆಯಲ್ಲಿ ಇತ್ತೀಚೆಗೆ ಅಧಿಕಾರಿ ಮತ್ತು ಇತರೆ ಸಿಬ್ಬಂದಿಯವರೆ ವಸತಿಗಾಗಿ ನಿರ್ಮಾಣ ಮಾಡಿರುವ ಮನೆಗಳ ಸಂಖ್ಯೆ ಎಷ್ಟು ಹಾಗೂ ಇದಕ್ಕೆ ತಗುಲಿದ ವೆಚ್ಚವೆಷ್ಟು;

ಉ) ಆರಂಭದಿಂದ ಮಾಸ್ತಿಕಟ್ಟೆಯಲ್ಲಿ ಮೂಲಭೂತ ಸೌಕರ್ಯಕ್ಕಾಗಿ ಕಛೇರಿ ಮತ್ತು ಇತರೆ ಸ್ಥಿರ ಆಸ್ತಿಗಾಗಿ ಮಾಡಿದ ಖರ್ಚು ಎಷ್ಟು;

ಊ) ಈಗ ಕಛೇರಿ ಸ್ಥಳಾಂತರದಿಂದ ವಸತಿ ಗೃಹಗಳ ನಿರ್ಮಾಣಕ್ಕಾಗಿ ಮಾಡಿದ ಖರ್ಚು ನಿರರ್ಥಕ ಅಲ್ಲವೇ;

ಋ) ಈ ರೀತಿ ತಪ್ಪು ನಿರ್ವಹಣೆ ಮಾಡಿದ ಅಧಿಕಾರಿಗಳು ಯಾರು ಮತ್ತು ಅನಗತ್ಯ ನಿಗಮಕ್ಕೆ ನಷ್ಟ ಉಂಟು ಮಾಡಿದ ಇವರ ಮೇಲೆ ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು ಹಾಗೂ ಯಾವಾಗ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ವರಾಹಿ ಯೋಜನೆಯ ಮಾಸ್ತಿ ಕಟ್ಟೆ ವಸಾಹತುವಿನಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್) ಕಾರ್ಯ ನಿರ್ವಾಹಕ ಇಂಜಿನಿಯರ್ (ವಿದ್ಯುತ್), ಸಹಾಯಕ ಕಾರ್ಯನಿರ್ವಾಹಕ (ಯಾಂತ್ರಿಕ), ವೈದ್ಯಕೀಯ, ಭದ್ರತಾಧಿಕಾರಿ ಹಾಗೂ ಶಾಲೆಗಳು ಹೀಗೆ 6 ಕಛೇರಿಗಳಿರುತ್ತವೆ.

ನೌಕರರ ಸಂಖ್ಯೆ: ಅಧಿಕಾರಿಗಳು : 28, ಕಾರ್ಮಿಕ ವರ್ಗ: 134, ಒಟ್ಟು : 162.

ಆ) ಅಧೀಕ್ಷಕ ಇಂಜಿನಿಯರ್ (ಸಿವಿಲ್), ಸಿಬ್ಬಂದಿ ಅಧಿಕಾರಿ ಹಾಗೂ ಲೆಕ್ಕಾಧಿಕಾರಿ, ಈ ಕಛೇರಿಗಳನ್ನು ಅಗತ್ಯಕ್ಕೆ ಅನುಗುಣವಾಗಿ, ಹೊಸಂಗಡಿಗೆ ಸ್ಥಳಾಂತರಿಸಲಾಗಿದೆ.

ಇ) ಕರ್ನಾಟಕ ಸರ್ಕಾರವು ವರಾಹಿ ಯೋಜನೆಯ 2 ಮತ್ತು 4ನೇಯ ಘಟಕದ (ಹೊಸಂಗಡಿ ವಿದ್ಯುದಾಗಾರದ) ವಿಸ್ತರಣೆ (2x115 M.W.)ಯನ್ನು ನಿಗಮಕ್ಕೆ ವಹಿಸಿದೆ. ಆದುದರಿಂದ, ಯೋಜನೆಯ ನಿರ್ವಹಣೆಗಾಗಿ ಮೇಲ್ಕಂಡ ಕಛೇರಿಗಳನ್ನು ನೌಕರರ ಸಹಿತ ಹೊಸಂಗಡಿಗೆ ವರ್ಗಾಯಿಸಲಾಗಿದೆ.

ಈ) 1998–2000 ಅವಧಿಯಲ್ಲಿ ನಿರ್ಮಾಣ ಮಾಡಿರುವ ಮನೆಗಳ ಸಂಖ್ಯೆ :

ಅಧಿಕಾರಿಗಳಿಗಾಗಿ 29 ಮನೆಗಳು ಹಾಗೂ ಸಿಬ್ಬಂದಿಗಾಗಿ 64 ಮನೆಗಳು ಒಟ್ಟಾರೆ 93 ಮನೆಗಳು.

ಮನೆಗಳ ನಿರ್ಮಾಣಕ್ಕೆ 574.00 ಲಕ್ಷ ರೂಪಾಯಿಗಳು ಖರ್ಚಾಗಿದೆ.

ಊ) ಮೇಲಿನ 574.00 ಲಕ್ಷ ರೂ.ಗಳನ್ನು ಹೊರತುಪಡಿಸಿ. ಆರಂಭದಿಂದ ಮಾಸ್ತಿಕಟ್ಟೆಯಲ್ಲಿ ಮೂಲಭೂತ ಸೌಕರ್ಯಕ್ಕಾಗಿ ಕಛೇರಿ ಮತ್ತು ಇತರೆ ಸ್ಥಿರ ಆಸ್ತಿಗಾಗಿ ಮಾಡಿದ ಖರ್ಚು 410 ಲಕ್ಷ ರೂ.ಗಳು (ನಿಗಮದ ಸ್ಥಿರಾಸ್ತಿ ಪಟ್ಟಿಯ ಪ್ರಕಾರ).

ಋ) ವರಾಹಿ ಯೋಜನೆಯ ನಿರ್ಮಾಣ ಕಾರ್ಯ ಪೂರ್ಣಗೊಂಡ 15 ವರ್ಷಗಳು ಕಳೆದಿವೆ. ಮಾಸ್ತಿಕಟ್ಟಡ ವಸಾಹತುವಿನಲ್ಲಿ 1977–78ರ ಅವಧಿಯಲ್ಲಿ ತಾತ್ಕಾಲಿಕ (Temporary) ಮನೆಗಳನ್ನು ಕಟ್ಟಲಾಗಿತ್ತು. ಸುಮಾರು 25 ವರ್ಷ ಉಪಯೋಗಿಸಿ ಈ ಮನೆಗಳ ಸಂಪೂರ್ಣ ಪ್ರಯೋಜನ ಪಡೆಯಲಾಗಿದೆ. ಈ ತಾತ್ಕಾಲಿಕ ಮನೆಗಳು ತೀರಾ ದುರಸ್ತಿಯಲ್ಲಿದ್ದು ವಾಸಯೋಗ್ಯವಿರುವುದಿಲ್ಲ.

ಅಗತ್ಯ ಸೇವಾ ನೌಕರರಿಗೆ ಮಾತ್ರ 1998–2000ದಲ್ಲಿ ಖಾಯಂ ನಿವಾಸಗಳ ನಿರ್ಮಾಣವಾಗಿದೆ.

ಋ) ಖಾಯಂ ನಿವಾಸಗಳ ನಿರ್ಮಾಣ ಮೇಲಿನ ಕಂಡಿಕೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಆಗಿದೆ. ಕಛೇರಿಗಳ ಸ್ಥಳಾಂತರವನ್ನು ಯೋಜನಾ ಕಾರ್ಯದ ನಿರ್ವಹಣೆಯ ಹಿತ ದೃಷ್ಟಿಯಿಂದ ಕೈಗೊಳ್ಳಲಾಗಿದೆ. ಆದುದರಿಂದ, ಸರಿಯಾದ ನಿಟ್ಟಿನಲ್ಲೇ ತೀರ್ಮಾನ ತೆಗೆದುಕೊಳ್ಳಲಾಗಿದೆ.

537(790) : ಶ್ರೀ ಬಸವರಾಜ ಭೀಮಪ್ಪ ಹಿತ್ನಾಳ್ ಕೆ. (ಕೊಪ್ಪಳ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಲಿಗುಡ್ಡ ನೀರಾವರಿ ಯೋಜನೆ ಯಾವ ಹಂತದಲ್ಲಿದೆ;

ಆ) ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದ ಎಷ್ಟು ಕ್ಷೇತ್ರ ನೀರಾವರಿಯಲ್ಲಿವೆ ಹಾಗೂ ಅವು ಯಾವುವು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಸಿಂಗಟಾಲೂರು–ಹುಲಿಗುಡ್ಡ ಏತ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ: ಜಸಂಇ 115 ವಿಬ್ಯಾಇ 2003, ದಿನಾಂಕ 6–9–2003ರನ್ವಯ ರೂ. 787 ಕೋಟಿ ಮೊತ್ತದ ಮಾರ್ಪಡಿತ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಆಡಳಿತಾತ್ಮಕ ಅನುಮೋದನೆಗಾಗಿ ಕರ್ನಾಟಕ ನೀರಾವರಿ ನಿಗಮದಿಂದ ಪ್ರಸ್ತಾವನೆ ಬಂದ ನಂತರ ಪರಿಶೀಲಿಸಲಾಗುವುದು ಬ್ಯಾರೇಜ್ ಮತ್ತು ಗೇಟಿನ ಕೆಲಸಗಳನ್ನು ವಹಿಸಿಕೊಡಲಾಗಿದೆ. ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಕಡಿಮೆಯಾದಾಗ ಬ್ಯಾರೇಜ್ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಆ) ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ, ಯೋಜನಾವಾರು ನೀರಾವರಿಗೊಳಪಡುವ ಹಾಗೂ ಈಗಾಗಲೇ ನೀರಾವರಿಯಾಗುತ್ತಿರುವ ಕ್ಷೇತ್ರದ ವಿವರ ಈ ಕೆಳಕಂಡಂತೆ ಇರುತ್ತದೆ.